ಇ) ಶಾಲಾ ಶಿಕ್ಷಕರಿಗೆ ಈ ವಸತಿ ನಿಲಯಗಳನ್ನು ಹಂಚಿಕೆ ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಈ) ಹಾಗಿದ್ದಲ್ಲಿ, ಶಾಲಾ ಶಿಕ್ಷಕರಿಗೆ ವಸತಿ ನಿಲಯವನ್ನು ಹಂಚಿಕೆ ಮಾಡಲು ಇರುವ ತೊಂದರೆಯೇನು (ವಿವರ ನೀಡುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಜೋಗ ವಸಾಹತುವಿನಲ್ಲಿ ಹಾಲಿ 46 ರಿಂದ 48 ವರ್ಷಗಳ ಹಿಂದೆ ಕಟ್ಟಿರುವ 183 ತಾತ್ಕಾಲಿಕ ಮನೆಗಳು ಇರುತ್ತವೆ. ಅವುಗಳಲ್ಲಿ 124 ಮನೆಗಳು ಶಿಥಿಲಾವಸ್ಥೆಯಲ್ಲಿದ್ದು, ವಾಸಕ್ಕೆ ಯೋಗ್ಯವಾಗಿರುವುದಿಲ್ಲ. ಉಳಿದ 59 ಮನೆಗಳಲ್ಲಿ ನಿಗಮದ ಉದ್ಯೋಗಿಗಳು ವಾಸವಾಗಿರುತ್ತಾರೆ.

ಆ) ಈ ಮನೆಗಳು ವಾಸಕ್ಕೆ ಯೋಗ್ಯವಿಲ್ಲದಿರುವುದರಿಂದ, ಈ ಮನೆಗಳನ್ನು ಕೆಡವಿ ಶಾಶ್ವತ ಮನೆಗಳನ್ನು ನಿಗಮದ ಸಿಬ್ಬಂದಿಗಳ ಅವಶ್ಯಕತೆಯ ಆಧಾರದ ಮೇಲೆ ಹಂತ ಹಂತವಾಗಿ ನಿರ್ಮಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

701(1153) ಶ್ರೀ ಗೋಪಾಲಕೃಷ್ಣ ಬೇಳೂರು ಬಿ.ಕೆ. (ಸಾಗರ) : ಮಾನ್ಯ ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಗರದ ಪಟ್ಟಣದಲ್ಲಿ ಖಾಸಗಿ ಒಡೆತನದ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳೆಷ್ಟು;

ಆ) ಸರ್ಕಾರದ ಒಡೆತನದ ಸರ್ಕಾರಿ ಕಛೇರಿಗಳಿರುವ ಕಟ್ಟಡಗಳ ಸಂಖ್ಯೆ ಎಷ್ಟು (ಕಛೇರಿವಾರು ವಿವರ ಒದಗಿಸುವುದು);

ಇ) ಖಾಲಿ ಇರುವ ಸರ್ಕಾರಿ ಕಟ್ಟಡಗಳೆಷ್ಟು (ವಿವರ ಒದಗಿಸುವುದು)?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ, ಬಂದರು ಮತ್ತು ಇಂಧನ ಸಚಿವರು):

ಅ) ಖಾಸಗಿ ಒಡೆತನದ ಕಟ್ಟಡಗಳಲ್ಲಿ ಇರುವ ಒಟ್ಟು ಸರ್ಕಾರಿ ಕಛೇರಿಗಳು 17 (ಕಛೇರಿವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ)

ಆ) ಸರ್ಕಾರದ ಒಡೆತನದ ಕಟ್ಟಡಗಳಲ್ಲಿ ಸರ್ಕಾರಿ ಕಛೇರಿಗಳು ಒಟ್ಟು 15 (ಕಛೇರಿವಾರು ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ).

ಇ) ಯಾವುದೂ ಇರುವುದಿಲ್ಲ.

ಅನುಬಂಧ-1

ಸಾಗರ ಪಟ್ಟಣದಲ್ಲಿ ಖಾಸಗಿ ಒಡೆತನದ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳ ವಿವರಗಳು ಕೆಳಕಂಡಂತೆ ಇರುತ್ತದೆ.

1. ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ.
2. ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ.
3. ಸಹಾಯಕ ನಿರ್ದೇಶಕರು, ಮೀನುಗಾರಿಕೆ ಇಲಾಖೆ.
4. ನಿರೀಕ್ಷಕರು, ಬಂದರು ಮತ್ತು ಜಲಸಾರಿಗೆ ಇಲಾಖೆ.
5. ಗೃಹ ರಕ್ಷಣದಳ ಇಲಾಖೆ
6. ಕಾನೂನು ಮಾಪನ ನಿರೀಕ್ಷಕರ ಕಛೇರಿ.
7. ಕಾರ್ಮಿಕ ನಿರೀಕ್ಷಕರ ಕಛೇರಿ.
8. ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ.
9. ಹಿರಿಯ ರೇಷ್ಮೆ ನಿರೀಕ್ಷಕರ ಕಛೇರಿ.
10. ಸಹಕಾರ ಸಂಘಗಳ ನಿಬಂಧಕರ ಕಛೇರಿ.
11. ಉಪ ರಕ್ಷಣಾಧಿಕಾರಿಗಳ ಕಛೇರಿ.
12. ಸಮಾಜ ಕಲ್ಯಾಣ ಯೋಜನಾಧಿಕಾರಿಗಳ ಕಛೇರಿ.
13. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಗೋದಾಮು.
14. ಕೆ.ಎ.ಪಿ.ಸಿ.ಎಂ.ಎಸ್. ಕಛೇರಿಯ ಗೋದಾಮು.
15. ವಲಯ ಅರಣ್ಯಾಧಿಕಾರಿಗಳ ಯೋಜನೆ ಕಛೇರಿ.
16. ಅಬಕಾರಿ ನಿರೀಕ್ಷಕರ ಕಛೇರಿ.
17. ಜಲಾನಯನ ಅಭಿವೃದ್ಧಿ ಇಲಾಖೆಯ ಕೃಷಿ ಅಧಿಕಾರಿಗಳ ಕಛೇರಿ.

ಅನುಬಂಧ-2

ಸಾಗರ ಪಟ್ಟಣದಲ್ಲಿ ಸರ್ಕಾರಿ ಒಡೆತನದ ಕಟ್ಟಡಗಳಲ್ಲಿರುವ ಸರ್ಕಾರಿ ಕಛೇರಿಗಳ ವಿವರಗಳು ಕೆಳಕಂಡಂತೆ ಇರುತ್ತದೆ.

1. ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಜಿಲ್ಲಾ ಪಂಚಾಯತ್, ಸಾಗರ ವಿಭಾಗ.
2. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಜಿಲ್ಲಾ ಪಂಚಾಯತ್, ಸಾಗರ ಉಪವಿಭಾಗ.
3. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕೆಯುಡಬ್ಲ್ಯೂಎಸ್ ಮತ್ತು ಡಿಬಿ, ಸಾಗರ.

4. ತೋಟಗಾರಿಕಾ ಇಲಾಖೆಯವರ ಸಹಾಯಕ ನಿರ್ದೇಶಕರ ಕಛೇರಿ.
5. ಕೃಷಿ ಇಲಾಖಾ ಸಹಾಯಕ ನಿರ್ದೇಶಕರ ಕಛೇರಿ.
6. ಪಶು ವೈದ್ಯಕೀಯ ಇಲಾಖಾ ಸಹಾಯಕ ನಿರ್ದೇಶಕರ ಕಛೇರಿ.
7. ಗ್ರಾಮೀಣ ಹಾಗೂ ನಗರ ಪ್ರದೇಶ ಆರಕ್ಷಕ ಠಾಣೆ.
8. ಲೋ.ಇ. ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ.
9. ತಾಲ್ಲೂಕು ಕಛೇರಿ ಸಂಕೀರ್ಣ.
10. ಸಹಾಯಕ ಕಮೀಷನರ್, ಕಂದಾಯ ಇಲಾಖಾ ಕಛೇರಿ.
11. ನ್ಯಾಯಾಲಯ ಸಂಕೀರ್ಣ.
12. ಗ್ರಂಥಾಲಯ ಇಲಾಖೆ.
13. ವಾಣಿಜ್ಯ ಇಲಾಖಾ ಸಹಾಯಕ ಕಮೀಷನರ್ ಕಛೇರಿ.
14. ಅರಣ್ಯ ಇಲಾಖಾ ಡಿಎಫ್ಓ ಕಛೇರಿ.
15. ಅಗ್ನಿಶಾಮಕ ದಳದ ಕಛೇರಿ.

702(1299) ಶ್ರೀ ಗೋಪಾಲಕೃಷ್ಣ (ಸಾಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಾಗರದ ಪ್ರಸಿದ್ಧವಾದ ಕೆಳದಿಯಲ್ಲಿ ಕೆಳದಿ ಉತ್ಸವ ಆಚರಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಇದುವರೆವಿಗೂ ಕೆಳದಿ ಉತ್ಸವ ಆಚರಿಸದೆ ಇರಲು ಸರ್ಕಾರಕ್ಕಿರುವ ಅಡಚಣೆಗಳೇನು?

ಇ) ಹಾಗಿದ್ದಲ್ಲಿ ಯಾವಾಗ ಆಚರಿಸಲಾಗುವುದು? (ವಿವರ ನೀಡುವುದು)

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳು) :

ಅ) ಪರಿಶೀಲಿಸಲಾಗುತ್ತಿದೆ.

ಆ) ಈ ಉತ್ಸವದ ಸ್ಥೂಲ ರೂಪುರೇಷೆಗಳನ್ನು ಸಿದ್ಧಪಡಿಸಬೇಕಾದ ಕಾರಣದಿಂದ.

ಇ) ಶಿವಮೊಗ್ಗ ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಸಂಘ ಸಂಸ್ಥೆಗಳೊಂದಿಗೆ ಈ ಬಗ್ಗೆ ಸಮಾಲೋಚಿಸಿ ಸೂಕ್ತ ತೀರ್ಮಾನವನ್ನು ಸದ್ಯದಲ್ಲೇ ತೆಗೆದುಕೊಳ್ಳಲಾಗುವುದು.

703(959) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯ ಮಾಹಿತಿ ಆಯೋಗ ರಚನೆಯಾಗಿದೆಯೇ;

ಆ) ರಾಜ್ಯ ಮಾಹಿತಿ ಆಯೋಗದ ರೂಪುರೇಷೆಗಳಾವುವು (ಸಂಪೂರ್ಣ ಮಾಹಿತಿ ನೀಡುವುದು)